# ಅಧ್ಯಾಯ–VI

# ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ

## ಅಧ್ಯಾಯ–VI

## ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ

*ಮಂಡಳಿಯು ತನ್ನ ಕಾರ್ಯಗಳನ್ನು ನಿರ್ವಹಿಸಲು ನಿಯತಕಾಲಿಕ ಸಭೆಗಳನ್ನು ನಡೆಸದ ಕಾರಣ ಶೃಂಗ ಮಟ್ಟದಲ್ಲಿನ ಮೇಲ್ವಿಚಾರಣೆಯು ಅಸಮರ್ಪಕವಾಗಿತ್ತು. ಮಂಡಳಿಯು ನಿರಂತರವಾಗಿ ಸಭೆಗಳನ್ನು ನಡೆಸದಿರುವುದು ಹಿಂದಿನ ಸಭೆಗಳಲ್ಲಿ ತೆಗೆದುಕೊಂಡ ನಿರ್ಧಾರಗಳ ಅನುಸರಣೆಯ ಮೇಲೆ ಪರಿಣಾಮ ಬೀರಿತ್ತು. ಅನುಷ್ಠಾನ ಸಂಸ್ಥೆಗಳು ಕಾರ್ಯಗತಗೊಳಿಸಿದ ಕಾಮಗಾರಿಗಳ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಮಂಡಳಿಯು ಇನ್ನೂ ದೃಢವಾದ ಗುಣಮಟ್ಟದ ಭರವಸೆ ಕಾರ್ಯವಿಧಾನವನ್ನು ಸ್ಥಾಪಿಸಬೇಕಾಗಿದೆ ಮತ್ತು ಕಾಮಗಾರಿಗಳ ಯಾವುದೇ ಪರಿಣಾಮದ ಮೌಲ್ಯಮಾಪನವನ್ನು ಕೈಗೊಂಡಿರಲಿಲ್ಲ. ಅಲ್ಲದೆ, ಸಾಮಾಜಿಕ ಲೆಕ್ಕಪರಿಶೋಧನೆಯ ಮೂಲಕ ತನ್ನ ಕಾಮಗಾರಿಗಳ ಮೇಲ್ವಿಚಾರಣೆಯಲ್ಲಿ ಸಾರ್ವಜನಿಕ ಭಾಗವಹಿಸುವಿಕೆಯನ್ನು ಖಚಿತಪಡಿಸುವ ಚೌಕಟ್ಟು ಸಹ ಲಭ್ಯವಿರಲಿಲ್ಲ*

ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಕಾರ್ಯವಿಧಾನಗಳು ಸಂಪನ್ಮೂಲಗಳ ಸಮರ್ಥ ಬಳಕೆಯನ್ನು ಮತ್ತು ನಿರೀಕ್ಷಿತ ಸಮಯದ ಚೌಕಟ್ಟಿನೊಳಗೆ ಯೋಜಿತ ಗುರಿಗಳನ್ನು ಸಾಧಿಸುವುದನ್ನು ಖಚಿತಪಡಿಸುತ್ತವೆ. ಮಂಡಳಿಯ ಕಾಮಗಾರಿಗಳನ್ನು ಅನೇಕ ಅನುಷ್ಠಾನ ಏಜೆನ್ಸಿಗಳ ಮೂಲಕ ಕಾರ್ಯಗತಗೊಳಿಸುವುದರಿಂದ ದೃಢವಾದ ಮತ್ತು ಪರಿಣಾಮಕಾರಿಯಾದ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ವ್ಯವಸ್ಥೆಯನ್ನು ಹೊಂದಿರುವುದು ಅತ್ಯಗತ್ಯವಾಗಿದೆ.

### 6.1 ಉನ್ನತ ಮಟ್ಟದಲ್ಲಿ ಮೇಲ್ವಿಚಾರಣೆಯ ಕೊರತೆ

ಮಂಡಳಿಯ ಆದೇಶ 2013ರ ಷರತ್ತು 10ರ ಪ್ರಕಾರ, ಮಂಡಳಿಯು ತನ್ನ ವಾರ್ಷಿಕ ಸಭೆಗಳ ದಿನಾಂಕ ಪಟ್ಟಿಯನ್ನು ಮುಂಚಿತವಾಗಿ ಘೋಷಿಸಬೇಕು ಮತ್ತು ತ್ರೈಮಾಸಿಕ ಸಭೆಗಳನ್ನು ನಡೆಸಬೇಕು.

ಮಂಡಳಿಯು ನಿಯಮಿತವಾಗಿ ಸಭೆಗಳನ್ನು ನಡೆಸದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಒಂದು ವರ್ಷದಲ್ಲಿ ನಾಲ್ಕು ತ್ರೈಮಾಸಿಕ ಸಭೆಗಳಿಗೆ ಪ್ರತಿಯಾಗಿ ಮಂಡಳಿಯು 2015–16ರಿಂದ 2017–18ರ ಅವಧಿಯಲ್ಲಿ ಎರಡು ಬಾರಿ ಮಾತ್ರ ಸಭೆ ಸೇರಿತ್ತು. 2019–20ರಿಂದ 2020–21ರ ಅವಧಿಯಲ್ಲಿ ಮಂಡಳಿಯು ಅಸ್ತಿತ್ವದಲ್ಲಿಲ್ಲದ ಕಾರಣ, ಈ ಅವಧಿಯಲ್ಲಿ ಯಾವುದೇ ಸಭೆಗಳನ್ನು ನಡೆಸಿರಲಿಲ್ಲ.

ಮಂಡಳಿಯು ತನ್ನ ಸಭೆಗಳಲ್ಲಿ ತೆಗೆದುಕೊಂಡ ನಿರ್ಧಾರಗಳ ಬಗ್ಗೆ ಸಾಕಷ್ಟು ಅನುಸರಣೆ ಇಲ್ಲದಿರುವುದನ್ನು ಸಹ ಲೆಕ್ಕಪರಿಶೋಧನೆಯು ಗಮನಿಸಿತು. ಮಂಡಳಿಯು ಈ ಕೆಳಕಂಡ ಕಾರ್ಯಕ್ರಮಗಳನ್ನು ಜಾರಿಗೆ ತರಲು ನಿರ್ಧರಿಸಿದ್ದರೂ ಸಹ ಅವುಗಳನ್ನು ಕಾರ್ಯಗತಗೊಳಿಸುವ ಕಾರ್ಯ ಯೋಜನೆಗಳಲ್ಲಿ ಸೇರಿಸಿರಲಿಲ್ಲ.

| ಯೋಜನೆ/ಪ್ರಸ್ತಾವನೆಯ ಹೆಸರು | ಉದ್ದೇಶ |
|---|---|
| ಎನ್‌ಇಇಟಿ ಮತ್ತು ಸಿಇಟಿ ತರಬೇತಿ | ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸನ್ನು ಸಾಧಿಸಲು ಆಯ್ಕೆಯಾದ ಬಿಪಿಎಲ್ ಸರ್ಕಾರಿ ಪಿಯು ಕಾಲೇಜು ವಿದ್ಯಾರ್ಥಿಗಳು ಉತ್ತಮ ತರಬೇತಿ ಪಡೆದ ಮತ್ತು ಅರ್ಹ ವಿಷಯ ತಜ್ಞರ ಮೂಲಕ ಸಬ್ಸಿಡಿ ದರದಲ್ಲಿ ಇತ್ತೀಚಿನ ಮತ್ತು ಉತ್ತಮ ಗುಣಮಟ್ಟದ ತರಬೇತಿಯನ್ನು ಪಡೆಯುವುದನ್ನ ಖಚಿತಪಡಿಸಿಕೊಳ್ಳುವುದು. |

| ಯೋಜನೆ/ಪ್ರಸ್ತಾವನೆಯ ಹೆಸರು | ಉದ್ದೇಶ |
|---|---|
| ಮಾಹಿತಿ ಜ್ಞಾನ ಕೇಂದ್ರ ಸ್ಥಾಪನೆ | ಪ್ರದೇಶದ ಜನರಲ್ಲಿ ವಿಶೇಷವಾಗಿ ಯುವಕರು ಮತ್ತು ರೈತರಲ್ಲಿ ಶಿಕ್ಷಣ, ಉದ್ಯೋಗ ಮತ್ತು ಕೃಷಿ ಕ್ಷೇತ್ರಗಳಲ್ಲಿ ಸಾರ್ವಜನಿಕರಿಗೆ ಅಗತ್ಯವಿರುವ ಎಲ್ಲಾ ಮಾಹಿತಿಯನ್ನು ಒದಗಿಸುವ ಜಾಗೃತಿ ಮೂಡಿಸಲು. |
| ಆಂಗ್ಲ ಭಾಷಾ ತರಬೇತಿ ಪ್ರಯೋಗಾಲಯ | ಕಲ್ಯಾಣ ಕರ್ನಾಟಕ ಪ್ರದೇಶದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶಿಕ್ಷಕರಿಗೆ ಇಂಗ್ಲಿಷ್ ಭಾಷೆಯನ್ನು ಕಲಿಸಲು ತರಬೇತಿ ನೀಡುವುದು. |

ಕಾಮಗಾರಿಗಳ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಲು ಮಂಡಳಿಯು ಹೈಕಾಸಾಫ್ಟ್ ಸಾಫ್ಟ್‌ವೇರ್ ಅಪ್ಲಿಕೇಶನ್‌ಅನ್ನು ಅಭಿವೃದ್ಧಿಪಡಿಸಿದೆ ಎಂದು ಸರ್ಕಾರವು ತಿಳಿಸಿತು (ಜುಲೈ 2022). ಮಂಡಳಿಯು ಆಂತರಿಕವಾಗಿ ಅಭಿವೃದ್ಧಿಪಡಿಸಿದ ಹೈಕಾಸಾಫ್ಟ್ ಅಪ್ಲಿಕೇಶನ್‌ನ ಬಳಕೆಯು ಉತ್ತಮ ಅಭ್ಯಾಸವಾಗಿದೆ ಎಂದು ಲೆಕ್ಕಪರಿಶೋಧನೆಯು ಪರಿಗಣಿಸುತ್ತದೆ

ಹೈಕಾಸಾಫ್ಟ್ ಎನ್ನುವುದು ಮಂಡಳಿಯಿಂದ ಅನುಮೋದಿಸಲಾದ ಮತ್ತು ಕಾರ್ಯಗತಗೊಳಿಸಲು ಅನುಷ್ಠಾನಗೊಳಿಸುವ ಏಜೆನ್ಸಿಗಳಿಗೆ ವಹಿಸಲಾದ ಅಭಿವೃದ್ಧಿ ಕಾರ್ಯಗಳ ವಿವರಗಳನ್ನು ಸಂಗ್ರಹಿಸಲು ಅಭಿವೃದ್ಧಿಪಡಿಸಿರುವ ವೆಬ್ ಆಧಾರಿತ ಅಪ್ಲಿಕೇಶನ್ ಆಗಿದೆ. ಈ ಕಾಮಗಾರಿಗಳ ವಿವಿಧ ಹಂತಗಳು ಮತ್ತು ಚಟುವಟಿಕೆಗಳನ್ನು ಸೆರೆಹಿಡಿಯಲು ಹೈಕಾಸಾಫ್ಟ್ ಅನುವು ಮಾಡಿಕೊಡುತ್ತದೆ. ಮಂಡಳಿಯ ಆಂತರಿಕ ಸಿಬ್ಬಂದಿಯ ವ್ಯವಹಾರ ಜ್ಞಾನ ಮತ್ತು ತಿಳುವಳಿಕೆಯನ್ನು ಬಳಸಿಕೊಂಡು ಈ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಗಿದೆ. ಮಂಡಳಿಯ ಅಗತ್ಯತೆಗಳ ಪ್ರಕಾರ ಮಂಡಳಿಯ (ಕೆಕೆಆರ್‌ಡಿಬಿ) ಐಟಿ ತಂಡವು ಹೈಕಾಸಾಫ್ಟ್ ಅಪ್ಲಿಕೇಶನ್‌ಅನ್ನು ಅಭಿವೃದ್ಧಿಪಡಿಸಿದೆ ಮತ್ತು ನಿರ್ವಹಿಸುತ್ತದೆ. ಮಂಡಳಿಯು ಹೈಕಾಸಾಫ್ಟ್ ಅಪ್ಲಿಕೇಶನ್‌ಅನ್ನು ವಿಕಸಿಸುವಲ್ಲಿ ಮುಂದುವರೆಯುತ್ತಿದೆ ಮತ್ತು ಲೆಕ್ಕಪರಿಶೋಧನಾ ಸಮಯದಲ್ಲಿ ಹೈಕಾಸಾಫ್ಟ್ ಅಪ್ಲಿಕೇಶನ್ ಸಾಫ್ಟ್‌ವೇರ್‌ಅನ್ನು ಸುಧಾರಿಸಲು ಮಂಡಳಿಯು ಮತ್ತಷ್ಟು ಉಪಕ್ರಮಗಳನ್ನು ಅನುಸರಿಸುತ್ತಿದೆ ಎಂದು ನಮಗೆ ತಿಳಿಸಲಾಯಿತು.

ಆದಾಗ್ಯೂ, ಕೆಳಗೆ ವಿವರಿಸಿದಂತೆ, ಸೆರೆಹಿಡಿಯಲಾದ ದತ್ತಾಂಶದಲ್ಲಿನ ಅಂತರವನ್ನು ಪರಿಹರಿಸಲು ಮಂಡಳಿಯು ಹೈಕಾಸಾಫ್ಟ್ ಅಪ್ಲಿಕೇಶನ್‌ಅನ್ನು ಬಲಪಡಿಸಬಹುದು ಎಂದು ಲೆಕ್ಕಪರಿಶೋಧನೆಯು ಅಭಿಪ್ರಾಯಪಟ್ಟಿದೆ:

(1) ರದ್ದುಪಡಿಸಿದ 3731 ಕಾಮಗಾರಿಗಳಲ್ಲಿ 980 ಕಾಮಗಾರಿಗಳಿಗೆ ಕಾಮಗಾರಿ ರದ್ದತಿಗೆ ಕಾರಣವು ಲಭ್ಯವಿರಲಿಲ್ಲ. 562 ಕಾಮಗಾರಿಗಳಿಗೆ ಕಾಮಗಾರಿ ರದ್ದತಿ ದಿನಾಂಕ ಲಭ್ಯವಿರಲಿಲ್ಲ.

(2) ಕಾಮಗಾರಿ ಬದಲಾವಣೆಗೆ ಸಂಬಂಧಿಸಿದ ಮಾಹಿತಿ ಲಭ್ಯವಿರಲಿಲ್ಲ.

(3) ಬಹುತೇಕ ಕಾಮಗಾರಿಗಳಿಗೆ ನಿರೀಕ್ಷಿತ ಕಾಮಗಾರಿ ಆರಂಭದ ದಿನಾಂಕ, ವಾಸ್ತವವಾಗಿ ಕಾಮಗಾರಿ ಆರಂಭವಾದ ದಿನಾಂಕ, ನಿರೀಕ್ಷಿತ ಕಾಮಗಾರಿ ಪೂರ್ಣಗೊಳಿಸುವ ದಿನಾಂಕ, ವಾಸ್ತವವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಿದ ದಿನಾಂಕ, ಹಸ್ತಾಂತರಿಸಿದ ವಿವರಗಳು ಲಭ್ಯವಿರಲಿಲ್ಲ. 2013–14 ಮತ್ತು 2020–21ರ ನಡುವಿನ ಅವಧಿಯಲ್ಲಿ 24,308 ಕಾಮಗಾರಿಗಳ ಪೈಕಿ ಒಟ್ಟು 19,520 ಕಾಮಗಾರಿಗಳನ್ನು ಜೂನ್ 2021ರಲ್ಲಿದ್ದಂತೆ ಮಂಡಳಿಯು ಪೂರ್ಣಗೊಳಿಸಿದೆ ಎಂದು ತೋರಿಸಿದೆ. ಆದಾಗ್ಯೂ, ಕೇವಲ 4387 ಕಾಮಗಾರಿಗಳಿಗೆ ನಿಗದಿತ ಪೂರ್ಣಗೊಳಿಸುವ ದಿನಾಂಕಗಳು ಮತ್ತು ವಾಸ್ತವವಾಗಿ ಪೂರ್ಣಗೊಂಡ ದಿನಾಂಕಗಳ ದತ್ತಾಂಶವು ಹೈಕಾಸಾಫ್ಟ್‌ನಲ್ಲಿ ಲಭ್ಯವಿದ್ದು, ಅದು ಕಾಮಗಾರಿಗಳ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಯಲ್ಲಿ ಸಹಾಯ ಮಾಡುವ ಸಾಮರ್ಥ್ಯವನ್ನು ದುರ್ಬಲಗೊಳಿಸುತ್ತದೆ.

(4) ಮಾದರಿಗಾಗಿ ಆಯ್ಕೆ ಮಾಡಿದ 601 ಕಾಮಗಾರಿಗಳಲ್ಲಿ ಕೆಳಗಿನ ವ್ಯತ್ಯಾಸಗಳನ್ನು ಗಮನಿಸಲಾಯಿತು:

(i) 47 ಕಾಮಗಾರಿಗಳಲ್ಲಿ ಯೋಜನಾ ಅನುಮೋದನೆಯ ದಿನಾಂಕವು ಆಡಳಿತಾತ್ಮಕ ಅನುಮೋದನೆಯ ನಂತರದ ದಿನಾಂಕವಾಗಿದ್ದು, ಇದು ಯೋಜನೆಯ ಅನುಮೋದನೆಗೆ ಮೊದಲೇ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ ಎಂಬುದನ್ನು ಸೂಚಿಸುತ್ತದೆ.

(ii) 92 ಕಾಮಗಾರಿಗಳಲ್ಲಿ ಆಡಳಿತಾತ್ಮಕ ಅನುಮೋದನೆ ದಿನಾಂಕವು ತಾಂತ್ರಿಕ ಅನುಮೋದನೆಯ ನಂತರದ ದಿನಾಂಕವಾಗಿತ್ತು.

(iii) 100 ಕಾಮಗಾರಿಗಳಲ್ಲಿ ತಾಂತ್ರಿಕ ಅನುಮೋದನೆಯ ದಿನಾಂಕವು ಟೆಂಡರ್ ಅಧಿಸೂಚನೆಯ ನಂತರದ ದಿನಾಂಕವಾಗಿತ್ತು.

(iv) 15 ಕಾಮಗಾರಿಗಳಲ್ಲಿ ಟೆಂಡರ್ ಅಧಿಸೂಚನೆಯ ದಿನಾಂಕವು ಟೆಂಡರ್ ಅನುಮೋದನೆಯ ನಂತರದ ದಿನಾಂಕವಾಗಿತ್ತು.

(v) 29 ಕಾಮಗಾರಿಗಳಲ್ಲಿ ಟೆಂಡರ್ ಅನುಮೋದನೆಯ ದಿನಾಂಕವು ಕಾಮಗಾರಿ ಆದೇಶದ ಅನುಮೋದನೆಯ ನಂತರದ ದಿನಾಂಕವಾಗಿತ್ತು.

(vi) ಏಳು ಕಾಮಗಾರಿಗಳಲ್ಲಿ ಕಾಮಗಾರಿ ಆದೇಶದ ದಿನಾಂಕವು ಕಾಮಗಾರಿ ಪೂರ್ಣಗೊಂಡ ನಂತರದ ದಿನಾಂಕವಾಗಿತ್ತು.

(5) 19520 ಪೂರ್ಣಗೊಂಡ ಕಾಮಗಾರಿಗಳಲ್ಲಿ, 2013–14ರಿಂದ 2019–20ರ ಅವಧಿಯಲ್ಲಿ 6900 ಕಾಮಗಾರಿಗಳಿಗೆ ಮೂರನೇ ವ್ಯಕ್ತಿಯ ತಪಾಸಣೆಯ ವಿವರಗಳು ಲಭ್ಯವಿರಲಿಲ್ಲ

## 6.2 ಗುಣಮಟ್ಟ ಭರವಸೆ/ನಿಯಂತ್ರಣ ಯೋಜನೆಗಳನ್ನು ತಯಾರಿಸದಿರುವುದು

ಮಂಡಳಿಯು ವಿವಿಧ ಕಾಮಗಾರಿಗಳು/ಯೋಜನೆಗಳ ಅನುಷ್ಠಾನಕ್ಕಾಗಿ ಗುಣಮಟ್ಟದ ಭರವಸೆ/ನಿಯಂತ್ರಣ ಯೋಜನೆಗಳನ್ನು ಸಿದ್ಧಪಡಿಸಿರಲಿಲ್ಲ. ವ್ಯಾಖ್ಯಾನಿಸಲಾದ ಗುಣಮಟ್ಟದ ನಿಯಂತ್ರಣ ನಿಯತಾಂಕಗಳ ಅನುಪಸ್ಥಿತಿಯಲ್ಲಿ, ಅನುಷ್ಠಾನ ಸಂಸ್ಥೆಗಳು ಕಾರ್ಯಗತಗೊಳಿಸಿದ ಕಾಮಗಾರಿಗಳ ಗುಣಮಟ್ಟವನ್ನು ನಿರ್ಧರಿಸಲಾಗಲಿಲ್ಲ.

ಮಂಡಳಿಯ ಕಾಮಗಾರಿಗಳನ್ನು ವಹಿಸಿಕೊಂಡಿದ್ದ ಅನುಷ್ಠಾನ ಏಜೆನ್ಸಿಗಳು, ಕಾರ್ಯಗತಗೊಳಿಸುವ ಪ್ರತಿ ಹಂತದಲ್ಲಿ ಕಾಮಗಾರಿಯನ್ನು ಗುಣಮಟ್ಟವನ್ನು ಖಚಿತಪಡಿಸುವ ಗುಣಮಟ್ಟದ ಭರವಸೆ ಯೋಜನೆಯನ್ನು[22] ರೂಪಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕಾಮಗಾರಿಗಳ ಗುಣಮಟ್ಟ ಪರಿಶೀಲನೆಗಾಗಿ ಮಂಡಳಿಯು ನೇಮಿಸಿದ ಮೂರನೆ ವ್ಯಕ್ತಿ ಏಜೆನ್ಸಿಯು ಸಹ ಅನುಷ್ಠಾನಗೊಳಿಸುವ ಏಜೆನ್ಸಿಗಳಿಂದ ಗುಣಮಟ್ಟದ ಭರವಸೆ ಯೋಜನೆಗಾಗಿ ಒತ್ತಾಯಿಸಲು ವಿಫಲವಾಗಿದ್ದವು. ಹೀಗೆ, ಅನುಷ್ಠಾನಗೊಳಿಸುವ ಏಜೆನ್ಸಿಗಳ ಮೂಲಕ ಮಂಡಳಿಯು ಕಾರ್ಯಗತಗೊಳಿಸಿದ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಭರವಸೆಯನ್ನು ಲೆಕ್ಕಪರಿಶೋಧನೆಯು ಪಡೆಯುವ ಸ್ಥಿತಿಯಲ್ಲಿರಲಿಲ್ಲ.

ವಿವಿಧ ಕಾಮಗಾರಿಗಳ/ಯೋಜನೆಗಳ ಅನುಷ್ಠಾನಕ್ಕಾಗಿ ಗುಣಮಟ್ಟ ಭರವಸೆ/ನಿಯಂತ್ರಣ ಕೈಪಿಡಿಯನ್ನು ಇನ್ನು ಮುಂದೆ ತಯಾರು ಮಾಡುವುದಾಗಿ ಸರ್ಕಾರವು ತಿಳಿಸಿತು (ಜುಲೈ 2022).

[22] ಇಂಡಿಯನ್ ರೋಡ್ ಕಾಂಗ್ರೆಸ್ (ಐಆರ್‌ಸಿ: ಎಸ್‌ಪಿ:112–2017 ಮತ್ತು ಐಆರ್‌ಸಿ: ಎಸ್‌ಪಿ:57–2000) ರಸ್ತೆ ಯೋಜನೆಗಳನ್ನು ಕಾರ್ಯಗತಗೊಳಿಸುವ ಸಂಸ್ಥೆಗಳು, ರಸ್ತೆಯನ್ನು ನಿರ್ಮಿಸುವ ಮೊದಲು ಐಆರ್‌ಸಿಯಲ್ಲಿ ನಿರ್ದಿಷ್ಟಪಡಿಸಿದ ಗುಣಮಟ್ಟದ ಅಂಶಗಳನ್ನು ಒಳಗೊಂಡಿರುವ ಗುಣಮಟ್ಟದ ಭರವಸೆ ಯೋಜನೆಯನ್ನು ಸಿದ್ಧಪಡಿಸಬೇಕು ಎಂದು ನಿಗದಿಪಡಿಸುತ್ತವೆ.

### *6.2.1 ಅನುಷ್ಠಾನ ಏಜೆನ್ಸಿಗಳು ಸಾಮಗ್ರಿಗಳ ಗುಣಮಟ್ಟ ಪರೀಕ್ಷೆಯನ್ನು ನಡೆಸದಿರುವುದು*

ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಏಜೆನ್ಸಿಗಳು/ಸಂಸ್ಥೆಗಳು/ಗುತ್ತಿಗೆದಾರರು ಕಾರ್ಯಗತ ಗೊಳಿಸುವಿಕೆಯ ಎಲ್ಲಾ ಹಂತಗಳಲ್ಲಿ, ಕ್ಷೇತ್ರ ಪ್ರಯೋಗಾಲಯಗಳು ಮತ್ತು ನಿಗದಿಪಡಿಸಿದ ಗುಣಮಟ್ಟ ಪರೀಕ್ಷಾ ಪ್ರಯೋಗಾಲಯಗಳಲ್ಲಿ ಸಾಮಗ್ರಿಗಳ ಗುಣಮಟ್ಟ ಪರೀಕ್ಷೆಗಳನ್ನು ನಡೆಸುವುದು ಅವಶ್ಯಕವಾಗಿದೆ. ಇದಲ್ಲದೆ, ಮೂರನೇ ವ್ಯಕ್ತಿಯ ಏಜೆನ್ಸಿಯು ಕಾಮಗಾರಿಯಲ್ಲಿ ಬಳಸಿದ ಸಾಮಗ್ರಿಗಳ ಗುಣಮಟ್ಟವನ್ನು ಹಾಗೂ ಕಾಮಗಾರಿ ಪೂರ್ಣಗೊಂಡ ನಂತರ ನಿರ್ಮಾಣದ ಸ್ಥಿರತೆಯನ್ನು ಪರಿಶೀಲಿಸಬೇಕು ಮತ್ತು ಪ್ರಮಾಣೀಕರಿಸಬೇಕು. ಸಂಬಂಧಪಟ್ಟ ಎಂಜಿನಿಯರ್‌ಗಳು ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿ ನಡೆಸುವುದನ್ನು ಮೇಲ್ವಿಚಾರಣೆ ಮಾಡಬೇಕು.

ಆದರೆ, ನಿರ್ಮಾಣದ ಮೊದಲು, ನಿರ್ಮಾಣದ ಸಮಯದಲ್ಲಿ ಮತ್ತು ನಿರ್ಮಾಣದ ನಂತರದ ನಿರ್ಮಾಣದ ವಿವಿಧ ಹಂತಗಳಲ್ಲಿ ಅನುಷ್ಠಾನಗೊಳಿಸುವ ಏಜೆನ್ಸಿಗಳಿಂದ ಸಾಮಗ್ರಿಗಳ ಗುಣಮಟ್ಟ ಪರೀಕ್ಷೆಗಳನ್ನು ನಡೆಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಈ ಪರೀಕ್ಷೆಗಳನ್ನು ನಡೆಸಲು ಮಂಡಳಿಯು ಮೂರನೇ ವ್ಯಕ್ತಿಯನ್ನು ನೇಮಿಸಿರುವುದರಿಂದ ತಾವು ಗುಣಮಟ್ಟದ ಪರೀಕ್ಷೆಗಳನ್ನು ಪ್ರತ್ಯೇಕವಾಗಿ ನಡೆಸಲಿಲ್ಲ ಎಂದು ಅನುಷ್ಠಾನ ಸಂಸ್ಥೆಗಳು ತಿಳಿಸಿದವು.

ಅನುಷ್ಠಾನ ಏಜೆನ್ಸಿಗಳಿಗೆ ವಹಿಸಿಕೊಟ್ಟಿರುವ ಕಾಮಗಾರಿಗಳ ಗುಣಮಟ್ಟ ಪರೀಕ್ಷೆಯನ್ನು ಖಚಿತಪಡಿಸಿಕೊಳ್ಳುವ ಮೂರನೇ ವ್ಯಕ್ತಿ ಸಲಹೆಗಾರರನ್ನು ತಾನು ನೇಮಿಸಿರುವುದಾಗಿ ಸರ್ಕಾರವು ತಿಳಿಸಿತು (ಜುಲೈ 2022).

ಸ್ವತಂತ್ರ ಮೂರನೇ ವ್ಯಕ್ತಿಯ ತಪಾಸಣೆಯು ಕೇವಲ ಪೂರಕ ಚಟುವಟಿಕೆಯಾಗಿರುತ್ತದೆ ಮತ್ತು ಮಂಡಳಿಯಿಂದ ನೇಮಕಗೊಂಡ ಮೂರನೇ ವ್ಯಕ್ತಿಯು ಕಾರ್ಯಗತಗೊಳಿಸಿದ ಕಾಮಗಾರಿಯ ಪ್ರತಿ ಹಂತದ ಮತ್ತು ಪೂರ್ಣಗೊಂಡ ನಂತರದ ತಪಾಸಣೆಗಳನ್ನು ನಡೆಸುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಇದು ಗುತ್ತಿಗೆದಾರರು ಮತ್ತು ಅನುಷ್ಠಾನ ಇಲಾಖೆಗಳಿಂದ ನಿರೀಕ್ಷಿಸಲಾದ ನಿರ್ದಿಷ್ಟ ಗುಣಮಟ್ಟದ ತಪಾಸಣೆಗಳನ್ನು ಸರಿಗಟ್ಟಲು ಸಾಧ್ಯವಿಲ್ಲ. ಅನುಷ್ಠಾನ ಮಾಡುವ ಏಜೆನ್ಸಿಗಳಾಗಲಿ ಅಥವಾ ಮೂರನೇ ವ್ಯಕ್ತಿಯಾಗಲಿ ನಿರ್ಮಾಣಕ್ಕೆ ಮೊದಲು ಅಥವಾ ಕಾಮಗಾರಿಗಳ ನಿರ್ಮಾಣದ ಸಮಯದಲ್ಲಿ ಸ್ಥಳಕ್ಕೆ ತಂದ ಸಾಮಗ್ರಿಗಳ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲಿಲ್ಲ.

## 6.3 ಕಾಮಗಾರಿಗಳ ಮೌಲ್ಯಮಾಪನ

ಮೌಲ್ಯಮಾಪನವು ಆವರ್ತಕ, ಪೂರ್ವಾವಲೋಕನದ ಮೌಲ್ಯಮಾಪನವಾಗಿದ್ದು, ಆಂತರಿಕವಾಗಿ ಅಥವಾ ಬಾಹ್ಯ ಸ್ವತಂತ್ರ ಏಜೆನ್ಸಿಗಳ ಮೂಲಕ ಕಾಮಗಾರಿಗಳ/ಯೋಜನೆಗಳ ಪ್ರಗತಿಯನ್ನು ಪರಿಶೀಲಿಸಲು ಮತ್ತು ಯೋಜನೆ ಮತ್ತು ಅನುಷ್ಠಾನದಲ್ಲಿನ ದುರ್ಬಲ ಪ್ರದೇಶಗಳನ್ನು ಗುರುತಿಸಿ, ತಿದ್ದುಪಡಿಯನ್ನು ಒದಗಿಸುವ ಪ್ರಕ್ರಿಯೆಯಾಗಿದೆ. 2016–17ರಿಂದ 2020–21ರ ಅವಧಿಯಲ್ಲಿ ಮಂಡಳಿಯು ಅನುಷ್ಠಾನಗೊಳಿಸಿರುವ ಯಾವುದೇ ಕಾಮಗಾರಿಗಳು/ಯೋಜನೆಗಳ ಮೌಲ್ಯಮಾಪನ/ಪರಿಣಾಮದ ನಿರ್ಧರಣೆಯನ್ನು ನಡೆಸ ದಿರುವುದನ್ನು ಗಮನಿಸಲಾಯಿತು.

ಮಂಡಳಿಯು ಅನುಷ್ಠಾನಗೊಳಿಸಿದ ಕಾಮಗಾರಿಗಳು/ಯೋಜನೆಗಳ ಮೌಲ್ಯಮಾಪನ/ಪರಿಣಾಮದ ನಿರ್ಧರಣೆಯನ್ನು ನಡೆಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದಾಗಿ ಸರ್ಕಾರವು ತಿಳಿಸಿತು (ಜುಲೈ 2022).

## 6.4 ಸಾಮಾಜಿಕ ಲೆಕ್ಕಪರಿಶೋಧನೆ


ಸಾಮಾಜಿಕ ಲೆಕ್ಕಪರಿಶೋಧನೆಯು ಸಾರ್ವಜನಿಕರ ಸಕ್ರಿಯ ಪಾಲುಗೊಳ್ಳುವಿಕೆ ಮತ್ತು ಅಧಿಕೃತ ದಾಖಲೆಗಳನ್ನು ವಾಸ್ತವತೆಗಳೊಂದಿಗೆ ಹೋಲಿಸುವ ಕಾರ್ಯಕ್ರಮ/ಯೋಜನೆಯ ಪರೀಕ್ಷೆ ಮತ್ತು

ಮೌಲ್ಯಮಾಪನವಾಗಿದೆ. ಸಾಮಾಜಿಕ ಪರಿಶೋಧನೆಯು ಸಾಮಾಜಿಕ ಪರಿವರ್ತನೆ, ಸಮುದಾಯ ಭಾಗವಹಿಸುವಿಕೆ ಮತ್ತು ಸರ್ಕಾರದ ಹೊಣೆಗಾರಿಕೆಗೆ ಪ್ರಬಲ ಸಾಧನವಾಗಿದೆ. ಮಂಡಳಿ ನಿಧಿಯಡಿ ಕೈಗೊಂಡ ಕಾಮಗಾರಿಗಳನ್ನು ಸಾಮಾಜಿಕ ಲೆಕ್ಕಪರಿಶೋಧನೆಗೆ ಒಳಪಡಿಸಿಲ್ಲ.

***ಶಿಫಾರಸು–9: ಕಾಮಗಾರಿಗಳ ಗುಣಮಟ್ಟವನ್ನು ಸ್ಪಷ್ಟ ಮತ್ತು ದೃಢವಾದ ಮೇಲ್ವಿಚಾರಣಾ ವ್ಯವಸ್ಥೆಯನ್ನು ಮಂಡಳಿಯು ಖಚಿತಪಡಿಸಿಕೊಳ್ಳಬೇಕು.***

***ಶಿಫಾರಸು–10: ಮಂಡಳಿಯು ಕಾಮಗಾರಿಗಳ ಅನುಷ್ಠಾನದ ಎಲ್ಲಾ ಹಂತಗಳಲ್ಲಿ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಗುಣಮಟ್ಟ ಭರವಸೆ ಮತ್ತು ಗುಣಮಟ್ಟ ನಿಯಂತ್ರಣ ಯೋಜನೆಗಳನ್ನು ಸಿದ್ಧಪಡಿಸಬೇಕು ಮತ್ತು ಸಾಮಾಜಿಕ ಲೆಕ್ಕಪರಿಶೋಧನೆಯ ಚೌಕಟ್ಟನ್ನು ಸ್ಥಾಪಿಸಬೇಕು.***


***ಶಿಫಾರಸು–11: ಸಭೆಗಳನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ ಮಂಡಳಿಯ ಆದೇಶ 2013ರ ಷರತ್ತು 10ರ ನಿಬಂಧನೆಗಳ ಅನುಸರಣೆಯನ್ನು ಮಂಡಳಿಯು ಖಚಿತಪಡಿಸಿಕೊಳ್ಳಬೇಕು.***



**ಬೆಂಗಳೂರು**

**(ಶಾಂತಿಪ್ರಿಯ ಎಸ್)**
**ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–I)**
**ಕರ್ನಾಟಕ**

**ಮೇಲುರುಜು ಮಾಡಲಾಗಿದೆ**



**ನವದೆಹಲಿ**

**(ಗಿರೀಶ್ ಚಂದ್ರ ಮುರ್ಮು)**
**ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು**